Registration Number:

Date& session:

**ST. JOSEPH'S UNIVERSITY, BENGALURU -27**
**II SEMESTER, OPEN ELECTIVE**
**SEMESTER EXAMINATION: MAY 2023**
**(Examination conducted in May 2023)**

# KAOE2: BAHUMUKHI KANNADA-2

**(For current batch students only)**

**Time: 90 Minutes** **Max Marks: 60**

**Note :** **This paper contains sixty (60) objective type questions of one (1) marks each. All questions are compulsory.**

**1. 'ಅಭಿನಯ' ಎಂಬ ಪದವು ಈ ಶಬ್ದಗಳಿಂದ ನಿಷ್ಪನ್ನವಾಗಿದೆ –**
1) ಅಭಿ + ನಯ 2) ಅಭಿನ+ಯ 3) ಅ+ಭಿನಯ 4) ಅಭಿ+ನಿ / ಣಿ

**2. ಅಭಿನಯದ ಬಗೆಗೆ ಈ ಕೆಳಗಿನ ಯಾವ ಹೇಳಿಕೆ ಸರಿಹೊಂದುವುದಿಲ್ಲ.**
1) ಅಭಿನಯ ಎಂಬುದು ಒಂದು ಕಲೆ.
2) ಪ್ರತಿಭೆಯಿಂದ ಹೊರ ಹೊಮ್ಮುವ ಪ್ರತಿಭಾ ಕಲೆ.
3) ಅಭಿನಯ ಕಲೆಗೆ ಕ್ರಿ.ಸ್ತ. ಪೂರ್ವದಷ್ಟು ಇತಿಹಾಸವಿದೆ.
4) ಅಭಿನಯ ಗೂಡಾಚಾರಿಕೆಯ ಕಲೆ

**3. ಭರತ ಮುನಿಯ ನಾಟ್ಯಶಾಸ್ತ್ರವು ಯಾವುದರ ಕುರಿತದ್ದಾಗಿದೆ.**
1) ನಾಟ್ಯ–ಅಭಿನಯ 2) ಸುಗಮ–ಸಂಗೀತ 3) ಶೃಂಗಾರ–ರತಿ 4) ಕ್ರೀಡೆ–ಯೋಗ

**4. ನಂದಿಕೇಶ್ವರನ ಪ್ರಸಿದ್ಧ ಕೃತಿ ಯಾವುದು?**
1) ಅಭಿನಯ ವಿಶಾರದೆ 2) ಅಭಿನಯ ದರ್ಪಣ 3) ಶಬ್ದಮಣಿದರ್ಪಣ 4) ಕಾವ್ಯದರ್ಪಣ

**5. ರಂಗಭೂಮಿಗೆ ಸಂವಾದಿಯಾದ ಇಂಗ್ಲೀಷ್ ಪದ ಯಾವುದು?**
1) ಥಿಯೇಟರ್ 2) ಥಿಂಕರ್ 3) ಟರ್ಮಿನೇಟರ್ 4) ಥರ್ಮೋಮೀಟರ್

**6. ರಂಗಭೂಮಿಯ ಉಗಮಕ್ಕೆ ಇವು ಪೂರಕ ಮತ್ತು ಪೋಷಕವಾದವುಗಳಲ್ಲ–**
1) ಧಾರ್ಮಿಕ ಆಚರಣೆಗಳು 2) ಪೂಜಾ ಕುಣಿತಗಳು 3) ಹಬ್ಬ ಹರಿದಿನಗಳು 4) ಬೇಸಾಯ

**7. ರಂಗಭೂಮಿಗೆ ಮೂಲ ತಾಯಿಬೇರು?**
1) ಜನಪದ ರಂಗಭೂಮಿ 2) ವೃತ್ತಿ ರಂಗಭೂಮಿ 3) ಹವ್ಯಾಸಿ ರಂಗಭೂಮಿ 4) ಕಲ್ಯಾಣ ರಂಗಭೂಮಿ

**8. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ**
ಎ) ಜನಪದ ರಂಗಭೂಮಿ – ಪೌರಾಣಿಕ ನಾಟಕಗಳು
ಬಿ) ವೃತ್ತಿ ರಂಗಭೂಮಿ – ಕಂಪನಿ ನಾಟಕಗಳು
1) ಎ ಮಾತ್ರ ಸರಿ 2) ಬಿ ಮಾತ್ರ ಸರಿ
3) ಎ ಮತ್ತು ಬಿ ಎರಡೂ ಸರಿ 4) ಎ ಮತ್ತು ಬಿ ಎರಡೂ ತಪ್ಪು

**9. ಪಾಶ್ಚಾತ್ಯ ರಂಗಭೂಮಿ ಮೊದಲು ಪ್ರವೇಶ ಪಡೆದ ನಗರಗಳು –**

1) ಕಲಕತ್ತಾ – ಬಾಂಬೆ 2) ಬೆಂಗಳೂರು – ಹೈದರಾಬಾದ್

3) ಮದ್ರಾಸ್ – ಅಮರಾವತಿ 4) ಅಹಮದಾಬಾದ್ – ತಿರುವಂಕುರ

**10. ಬಯಲಾಟ – ಇದರ ಅರ್ಥ**

1) ಬಯಲಿನಲ್ಲಿ ಆಡುವ ರಂಗಕಲೆ 2) ಬಯಲಿನಲ್ಲಿ ಆಡುವ ಸಂಗೀತಿಕಲೆ

3) ಬಯಲಿನಲ್ಲಿ ಕೆತ್ತುವ ಶಿಲ್ಪಕಲೆ 4) ಆಲಯದಲ್ಲಿ ಆಡುವ ಆಟ

**11. ದೊಡ್ಡಾಟದಲ್ಲಿ ಕಂಡು ಬರುವ ಎರಡು ಪ್ರಬೇಧಗಳು**

1) ಮೂಡಲ ಪಾಯ – ಪಡುವಲ ಪಾಯ 2)ತೆಂಕುತಿಟ್ಟು – ಬಡಗ ತಿಟ್ಟು

3)ವಾಯುವ್ಯ – ಪಾಯ 4) ಈಶಾನ್ಯ – ಪಾಯ

**12. ಕಾಂತಾರ ಸಿನಿಮಾದಲ್ಲಿ ಬಳಸಿಕೊಂಡ 'ಜನಪದ ರಂಗ ಕಲೆ' ಯಾವುದು**

1) ಶ್ರೀಕೃಷ್ಣ ಪಾರಿಜಾತ 2) ಬಸವನ ಕುಣಿತ 3) ಭೂತಾರಾಧನೆ 4) ಸೋಮನಕುಣಿತ

**13. ಹವ್ಯಾಸಿ ರಂಗಭೂಮಿ ಉಗಮಕ್ಕೆ ಮೂಲ ಕಾರಣ**

1) ಶಿಕ್ಷಣದ ಪ್ರಭಾವ 2) ಎಚ್ಚೆತ್ತ ಮಧ್ಯಮ ವರ್ಗ 3) ಸೋತ ವೃತ್ತಿರಂಗಭೂಮಿ 4) ಎಲ್ಲವೂ

**14. ಹಣಕೊಟ್ಟು ನಾಟಕ ನೋಡುವ ರಂಗಭೂಮಿ ಪರಂಪರೆ ಯಾವುದು?**

1) ವಿಲಾಸಿ ರಂಗಭೂಮಿ 2)ನಿವಾಸಿರಂಗಭೂಮಿ 3) ವೃತ್ತಿರಂಗಭೂಮಿ 4) ಹಾಸ್ಯರಂಗಭೂಮಿ

**15. 1925ಕ್ಕಿಂತ ಹಿಂದೆ ಈ ನಾಟಕಗಳು ಹೆಚ್ಚು ಪ್ರಚಲಿತದಲ್ಲಿದ್ದವು–**

ಎ) ಶಾಕುಂತಲ ಬಿ) ಲಂಕಾದಹನ ಸಿ) ರತ್ನಾವಳಿ

**ಸರಿಯಾದ ಆಯ್ಕೆಗಳು**

1) ಎ ಮತ್ತು ಬಿ ಸರಿ 2) ಬಿ ಮತ್ತು ಸಿ ಸರಿ 3) ಎ ಮತ್ತು ಸಿ ಸರಿ 4) ಎಲ್ಲವೂ ಸರಿ

**16. ಗ್ರೀಕ್ ರಂಗಭೂಮಿಯ ಉಗಮಕ್ಕೆ ಕಾರಣವಾದ ಅದಿದೇವತೆ**

1) ಡಯೋನೋಸಿಸ್ 2) ಡಯೋಮೆಡಿಸಿನ್ 3) ಡೈಲಾಸಿಸ್ 4) ಡ್ರೈಸಸ್

**17. ಗ್ರೀಕ್ ರಂಗಭೂಮಿಯ ಸುವರ್ಣ ಯುಗ**

1) ಕ್ರಿ.ಪೂ 7ನೇ ಶತಮಾನ 2) ಕ್ರಿ.ಪೂ 6ನೇ ಶತಮಾನ

3) ಕ್ರಿ.ಪೂ 8ನೇ ಶತಮಾನ 4) ಕ್ರಿ.ಪೂ 9ನೇ ಶತಮಾನ

**18. ಗ್ರೀಕ್ ನಾಟಕ ಪರಂಪರೆಯ ಅಶ್ವಿನಿದೇವತೆಗಳೆಂದ ಕರೆಯಲ್ಪಡುವ ನಾಟಕಕಾರರು**

1) ಈಸ್ಕಿಲಸ್ 2) ಸಫೋಕ್ಲಿಸ್

3) ಯೂರಿಪಿಡೀಸಿ 4) ಎಲ್ಲರೂ

**19. ಪಾಶ್ಚಾತ್ಯ ನಾಟಕ ಜಗತ್ತಿನಲ್ಲಿ ಮೊದಲ ಹಾಸ್ಯ ನಾಟಕಕಾರ –**

1) ಅರಿಸ್ಟೋಫೆನೀಸ್ 2) ಚಾರ್ಲಿಚಾಪ್ಲಿನ್

3) ಬ್ರೆಕ್ಟ್ 4) ಸಿಗ್ಮಂಡ್ ಪ್ರಾಯ್ಡ್

**20. ಇವುಗಳಲ್ಲಿ ಯಾವುದು ಪಾಶ್ಚಾತ್ಯ ನಾಟಕದ ಪರಿಕಲ್ಪನೆಯಲ್ಲ –**

1) ಟ್ರಾಜಿಡಿ ನಾಟಕಗಳು 2) ಕಾಮಿಕ್ ನಾಟಕಗಳು

3) ಅಬ್ಸರ್ವ್ಡ್‌ಥಿಯೇಟರ್ 4) ಸಂಗ್ಯಾಬಾಳ್ಯ

**21. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಶಿವರಾಮ ಕಾರಂತ | 1) ನೆನಪಿನದೋಣಿಯಲ್ಲಿ |
| ಬಿ) ಕುವೆಂಪು | 2) ಗಾಂಧೀಕ್ಲಾಸು |
| ಸಿ) ಕುಂ. ವೀರಭದ್ರಪ್ಪ | 3) ಸ್ಮೃತಿಪಟಲದಿಂದ |
| ಡಿ) ವಿಜಯಮ್ಮ | 4) ಕುದಿ ಎಸರು |

**ಸರಿಯಾದ ಉತ್ತರವನ್ನು ಆರಿಸಿ.**

1) ಎ–2, ಬಿ–1, ಸಿ–4, ಡಿ–3
2) ಎ–3, ಬಿ–1, ಸಿ–2, ಡಿ–4
3) ಎ–3, ಬಿ–1, ಸಿ–4, ಡಿ–2
4) ಎ–1, ಬಿ–3, ಸಿ–2, ಡಿ–4

**22. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಆಂಗಿಕ ಅಭಿನಯ | 1) ಸ್ಥಾಯಿ ಭಾವಗಳು |
| ಬಿ) ವಾಚಿಕ ಅಭಿನಯ | 2) ವೇಷ ಭೂಷಣ |
| ಸಿ) ಆಹಾರ್ಯ ಅಭಿನಯ | 3) ಧ್ವನಿ, ಮಾತು, ಹಾಡು. |
| ಡಿ) ಸಾತ್ತ್ವಿಕ ಅಭಿನಯ | 4) ಕೈ, ಕಾಲು, ಮುಖ, ಮುಖಭಾಗ |
| | 5) ಗೊಂಬೆಗಳು, ಪ್ರಾಣಿಗಳು |

**ಸರಿಯಾದ ಉತ್ತರವನ್ನು ಆರಿಸಿ.**

1) ಎ–2, ಬಿ–1, ಸಿ–4, ಡಿ–3
2) ಎ–3, ಬಿ–1, ಸಿ–2, ಡಿ–4
3) ಎ–3, ಬಿ–1, ಸಿ–4, ಡಿ–2
4) ಎ–4, ಬಿ–3, ಸಿ–2, ಡಿ–1

**23. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಚಾಮರಾಜೇಂದ್ರ ನಾಟಕ ಸಭಾ | 1) 1881 |
| ಬಿ) ಗುಬ್ಬಿ ನಾಟಕ ಮಂಡಳಿ | 2) 1884 |
| ಸಿ) ಕರ್ನಾಟಕ ನಾಟಕ ಕಂಪನಿ | 3) 1872 |
| ಡಿ) ಶ್ರೀ ಚಾಮುಂಡೇಶ್ವರಿ ನಾಟಕ ಸಭಾ | 4) 1919 |
| | 5) 1881 |

**ಸರಿಯಾದ ಉತ್ತರವನ್ನು ಆರಿಸಿ.**

1) ಎ–2, ಬಿ–1, ಸಿ–4, ಡಿ–3
2) ಎ–3, ಬಿ–1, ಸಿ–2, ಡಿ–4
3) ಎ–1, ಬಿ–2, ಸಿ–3, ಡಿ–4
4) ಎ–4, ಬಿ–3, ಸಿ–2, ಡಿ–1

**24. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಲಂಕೇಶ್ | 1) ಕನ್ನಡ ನಾಟ್ಯ ವಿಲಾಸಿ ಸಂಘ |
| ಬಿ) ಶ್ರೀರಂಗ | 2) ಪ್ರತಿಮಾ ನಾಟಕರಂಗ |
| ಸಿ) ಕೆ. ವಿ. ಸುಬ್ಬಣ್ಣ | 3) ಸಮುದಾಯ |
| ಡಿ) ಪ್ರಸನ್ನ | 4) ನೀನಾಸಂ |

**ಸರಿಯಾದ ಉತ್ತರವನ್ನು ಆರಿಸಿ.**

1) ಎ–2, ಬಿ–1, ಸಿ–4, ಡಿ–3
2) ಎ–3, ಬಿ–1, ಸಿ–2, ಡಿ–4
3) ಎ–1, ಬಿ–2, ಸಿ–3, ಡಿ–4
4) ಎ–4, ಬಿ–3, ಸಿ–2, ಡಿ–1

**25. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಕುವೆಂಪು | 1) ಶೂದ್ರ ತಪಸ್ವಿ |
| ಬಿ) ಟಿ.ಪಿಕೈಲಾಸಂ | 2) ಟೊಳ್ಳು ಗಟ್ಟಿ |
| ಸಿ) ಬೇಂದ್ರೆ | 3) ವಿಗಡ ವಿಕ್ರಮರಾಯ |
| ಡಿ) ಸಂಸ | 4) ಸಾಯೋ ಆಟ |

**ಸರಿಯಾದ ಉತ್ತರವನ್ನು ಆರಿಸಿ.**

1) ಎ–2, ಬಿ–1, ಸಿ–4, ಡಿ–3
2) ಎ–1, ಬಿ–2, ಸಿ–4, ಡಿ–3
3) ಎ–1, ಬಿ–2, ಸಿ–3, ಡಿ–4
4) ಎ–4, ಬಿ–3, ಸಿ–2, ಡಿ–1

**26. ಹೊಂದಿಸಿ ಬರೆಯಿರಿ**

| ಎ | ಬಿ |
|---|---|
| ಎ) ಈಸ್ಕಿಲಸ್ | 1) ಕ್ರಿ.ಪೂ450–388 |
| ಬಿ) ಸೋಫೋಕ್ಲಿಸ್ | 2) ಕ್ರಿ.ಪೂ.480–406 |
| ಸಿ) ಯೂರೀಪಿಡೀಸ್ | 3) ಕ್ರಿ.ಸೂ.495–406 |
| ಡಿ) ಅರಿಸ್ಟೋಫೆನೀಸ್ | 4) ಕ್ರಿ.ಪೂ.525–456 |

**ಸರಿಯಾದ ಉತ್ತರವನ್ನು ಆರಿಸಿ.**

1)ಎ–2, ಬಿ–1, ಸಿ–4, ಡಿ–3
2)ಎ–1, ಬಿ–2, ಸಿ–4, ಡಿ–3
3)ಎ–1, ಬಿ–2, ಸಿ–3, ಡಿ–4
4)ಎ–4, ಬಿ–3, ಸಿ–2, ಡಿ–1

**27. ಯಕ್ಷಗಾನ : ತೆಂಕುತಿಟ್ಟು :: ದೊಡ್ಡಾಟ:..............................**

1) ಬಡಗುತಿಟ್ಟು 2) ಸಣ್ಣಾಟ 3) ಮೂಡಲಪಾಯ 4) ಗೊಂಬೆಯಾಟ

**28. ರಂಗಸಜ್ಜಿಕೆ : ಸೈಡ್ ವಿಂಗ್ :: ಬೆಳಕು ವಿನ್ಯಾಸ:..............................**

1) ಲೈಟ್ ಡಿಮ್ಮ್ ಅಂಡ್ ಡಿಪ್ 2) ಮೇಕಪ್ 3) ಸೌಂಡ್ 4) ಸ್ಟೇಜ್

**29. ರಂಗಭೂಮಿ : ಥಿಯೇಟರ್ :: ಆತ್ಮಕತೆ:..............................**

1) ಬಯೋಗ್ರಫಿ 2) ಬಯೋಪಿಕ್ 3) ಆಟೋ ಬಯೋಗ್ರಫಿ 4) ಆಟೋ ಮೋನೋಗ್ರಫಿ

**30. ಹಾಸ್ಯ : ಕಾಮಿಕ್ :: ಟ್ರಾಜಿಡಿ :..............................**

1) ವಿಜಯೋತ್ಸಾಹ 2) ದುರಂತ 3)ಸುಖಾಂತ 4) ಶೋಕ

**31. ಡ್ರಾಮ : ಆ್ಯಕ್ಟಿಂಗ್ :: ಮ್ಯೂಸಿಕ್ :..............................**

1) ಗಾಯನ 2) ಸ್ಟಂಟ್ 3) ಕ್ಯಾಮೆರಾ 4) ಸ್ಕ್ರೀನ್

**32. ಆಟೋ ಬಯಾಗ್ರಫಿ : ಆತ್ಮಕತೆ :: ಜೀವನಕತೆ :**

1) ಲೈಫ್ ಸಪೋಟರ್ 2) ಆಟೋ ಮೋನೋಗ್ರಫಿ 3)ಮೋನೋಗ್ರಫಿ 4) ಬಯೋಗ್ರಫಿ

**33. ಇವು ಅರಿಸ್ಟೋಫೆನೀಸನ ಎರಡು ಪ್ರಸಿದ್ಧ ನಾಟಕಗಳು**

1. ಗ್ಲೋಬಲ್ ನೈಟ್ – ಡಾರ್ಕ್‌ನೈಟ್ 2) ಗುಡ್ ನೈಟ್ – ಅರೇಬಿಯನ್ ನೈಟ್ಸ್
3) ಮಿಡ್ ಸಮ್ಮರ್ ನೈಟ್ ಡ್ರೀಮಸ್ – ಓವರ್ ನೈಟ್ 4) ದಿ ನೈಟ್ಸ್ – ಪೀಸ್

**34. ಗ್ರೀಕ್‌ನ ಯಾವ ನಾಟಕಗಳನ್ನು ಪಿ. ಲಂಕೇಶ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ**

1) ಅಂತಿಗೊನೆ – ಈಡಿಪಸ್ 2) ಮೀಡಿಯಾ – ಅಡ್ಮಿಟಸ್
3) ಫಿಲೋಕ್ಟೆಟೀಸ್ – ಸೋಫೋಲಿಯನ್ ಐರಾನಿ 4) ವಾರ್‌ಅಂಡ್ ಪೀಸ್ – ಡೆಸ್ಡಿಮೋನಿ

**35. ಇವು ಚಂದ್ರಶೇಖರಕಂಬಾರರು ಬರೆದಿರುವ ನಾಟಕಗಳು**

1) ಮಾದಾರಿ ಮಾದಯ್ಯ – ಮಂಟೇಸ್ವಾಮಿ ಕಥಾಪ್ರಸಂಗ 2) ಬೋಳೇಶಂಕರ – ಶಿವರಾತ್ರಿ
3) ಷೇಕ್ಸ್‌ಪಿಯರ್ ಮನೆಗೆ ಬಂದ – ದಕ್ಲಕಥಾದೇವಿ ಕಾವ್ಯ 4) ಚಾಳೇಶ – ಸಂಕ್ರಾಂತಿ

**36. ಇವು ಕನ್ನಡದ ಅಸಂಗತ ನಾಟಕಗಳು**

1) ಟಿಂಗರ ಬುಡ್ಡಣ್ಣ – ಬೊಕ್ಕು ತಲೆಯ ನರ್ತಕಿ 2) ಕೊಡೆಗಳು – ತೆರೆಗಳು
3) ಪಾಪದ ಹೂಗಳು – ನನ್ನವ್ವ 4) ಗಾಂಧೀ ಸ್ಮೈಲ್ – ಬುದ್ಧ ಮತ್ತು ಧಮ್ಮ

**37. ಇವು ವಚನ ಚಳುವಳಿಯನ್ನು ಆಧರಿಸಿದ ನಾಟಕಗಳು**

1) ನನ್ನ ತಂಗಿಗೊಂದು ಗಂಡು ಕೊಡಿ – ಗಿಳಿಯು ಪಂಜರದೊಳಿಲ್ಲ
2) ನನ್ನ ತಾಯಿ – ನನ್ನ ಚಿಕ್ಕವ್ವ
3) ಶಿವರಾತ್ರಿ – ಸಂಕ್ರಾಂತಿ
4) ಹರಿಕೆಯ ಕುರಿ – ಗಂಗಾಮಾಯಿ

**38. ಕುವೆಂಪು ಅವರ ಪುರಾಣ ಆಧಾರಿತ ನಾಟಕಗಳು**

1) ಸ್ಮಶಾನಕುರುಕ್ಷೇತ್ರ – ಶೂದ್ರ ತಪಸ್ವಿ
2) ನನ್ನ ಗೋಪಾಲ – ಯಾರೂ ಅರಿಯದ ವೀರ
3) ವೆಂಕಟ ಶಾಮಿಯ ಪ್ರಣಯ ಪ್ರಸಂಗ – ಗೌಡರ ಮಲ್ಲಿ
4) ಪಾಂಚಜನ್ಯ – ಕೃತ್ತಿಕೆ

**39. ಇವು ಕನ್ನಡದ ದಲಿತ ಆತ್ಮಕತೆಗಳು**

1) ಹಕ್ಕಿನೋಟ – ಸಿಂಹಾವಲೋಕನ

2) ಅವತಾರಗಳು – ಗ್ರಾಮ ದೇವತೆಗಳು

3) ಊರುಕೇರಿ – ಗೌರ್ನಮೆಂಟ್ ಬ್ರಾಹ್ಮಣ

4) ನನ್ನ ಜನಗಳು – ಚಾಂಡಾಲನ ಸ್ವರ್ಗಾರೋಹಣ

**40. ತೆರೆಯ ಹಿಂಬದಿಯಲ್ಲಿ ನಾಟಕಕ್ಕೆ ಹಿನ್ನೆಲೆಯಾಗಿ ಹಾಡುವಿಕೆಯನ್ನು ಏನೆಂದು ಕರೆಯುವರು**

1) ಮುನ್ನೆಲೆಗಾಯನ 2) ಹಿನ್ನೆಲೆಗಾಯನ 3) ಹಿಂದಿನ ಗಾಯ 4) ಮುಂದಿನ ಗಾಯ

**41. ಕನ್ನಡದ ಮೊದಲ ನಾಟಕ**

1) ಮಿತ್ರಾವಿಂದಗೋವಿಂದ 2) ರತ್ನಾವಳಿ 3) ಜಾಂಬವತಿಕಲ್ಯಾಣ 4) ಆಯಾನ್

**42. ಅಬ್ಸರ್ವ್ಡ್ ಥಿಯೇಟರ್ ಅನ್ನು ಕನ್ನಡದಲ್ಲಿ ಹೀಗೆನ್ನುವರು**

1) ಅಸಂಗತ ನಾಟಕ 2) ಸಂಗತ ನಾಟಕ 3) ಗಂಭೀರ ನಾಟಕ 4) ದುರಂತ ನಾಟಕ

**43. ಪ್ರಸಾಧನ ಎಂದರೆ –**

ಎ) ವಸ್ತ್ರ ಹೊದಿಕೆ ಇಲ್ಲದ ಭಾಗಗಳಿಗೆ ಬಣ್ಣಗಳನ್ನು ಲೇಪನ ಮಾಡುವುದು

ಬಿ) ನಟನು ಉಡುವ ಉಡುಪುಗಳನ್ನು ಸಂಯೋಜಿಸುವುದು

ಸಿ) ಸ್ಟೇಜಿಗೆ ಬೆಳಕು ಬಿಡುವುದು

**ಸರಿಯಾದ ಆಯ್ಕೆಗಳು**

1) ಎ ಮತ್ತು ಸಿ ಸರಿ 2) ಎ ಮಾತ್ರ ಸರಿ

3) ಸಿ ಸರಿ ಬಿ. ಮತ್ತು ಎ ತಪ್ಪು 4) ಎಲ್ಲವೂ ಸರಿ

**44. ಪಾತ್ರ ದಾರಿಯು ಬಣ್ಣವನ್ನು ಹಚ್ಚಿಕೊಳ್ಳಲು ಕಾರಣವೇನು?**

ಎ) ಯೌವ್ವನ ಅಥವಾ ಮುಪ್ಪನ್ನು ಮರೆಮಾಚಲು

ಬಿ) ರಂಗದ ಮೇಲಿನ ಪ್ರಕಾಶಮಾನ ಕಾಂತಿಗೆ ಹೊಳೆಯಲು

ಸಿ) ಆಕರ್ಷನೀಯವಾಗಿ / ಕುರೂಪಿಯಾಗಿ ಕಾಣಲು

**ಸರಿಯಾದ ಆಯ್ಕೆಗಳು**

1) ಎ ಮತ್ತು ಸಿ ಸರಿ 2) ಎ ಮಾತ್ರ ಸರಿ

3) ಸಿ ಸರಿ ಬಿ. ಮತ್ತು ಎ ತಪ್ಪು 4) ಎಲ್ಲವೂ ಸರಿ

**45. ಈ ಕೆಳಗಿನ ಯಾವಾವ ಪಾತ್ರಗಳಿಗೆ ಯಾವಾವ ಬಣ್ಣ ಹಚ್ಚುತ್ತಿದ್ದರು.**

ಎ) ರಾಮ, ಕೃಷ್ಣ ದೇವತೆಗಳು – ನೀಲಿ

ಬಿ) ರಾಕ್ಷಸರು – ಕಪ್ಪು

ಸಿ) ಉತ್ತಮ / ಉನ್ನತ ಪಾತ್ರಗಳು–ಕೆಂಪು ಮಿಶ್ರಿತ ಹಳದಿ

**ಸರಿಯಾದ ಆಯ್ಕೆಗಳು**

1) ಎ ಮತ್ತು ಸಿ ಸರಿ 2) ಎ ಮಾತ್ರ ಸರಿ

3) ಸಿ ಸರಿ ಬಿ. ಮತ್ತು ಎ ತಪ್ಪು 4) ಎಲ್ಲವೂ ಸರಿ

**46. ಪಾತ್ರದಾರನ ವಸ್ತ್ರ ವಿನ್ಯಾಸ ಬಗ್ಗೆ ಸರಿಯಾದ ಹೇಳಿಕೆಯನ್ನು ಗುರುತಿಸಿ.**

ಎ) ಪಾತ್ರವನ್ನು ಜೀವಿಸಲು ಉಡುಪು ಅಗತ್ಯ

ಬಿ) ಪಾತ್ರದ ಉಡುಪು ಕಾಲ ಸೂಚಕವಾಗಿರುತ್ತದೆ

ಸಿ) ಏನೂ ಪ್ರಯೋಜನವಿರಲಾರದು

**ಸರಿಯಾದ ಆಯ್ಕೆಗಳು**

1) ಎ ಮತ್ತು ಸಿ ಸರಿ 2) ಎ ಮತ್ತು ಬಿ ಮಾತ್ರ ಸರಿ

3) ಸಿ ಸರಿ ಬಿ. ಮತ್ತು ಎ ತಪ್ಪು 4) ಎಲ್ಲವೂ ಸರಿ

**47. ಆಧುನಿಕ ಪರಿಭಾಷೆಯಲ್ಲಿ ವಸ್ತ್ರ ವಿನ್ಯಾಸವನ್ನು ಹೀಗೆ ಕರೆಯುತ್ತಾರೆ –**

1) ಸೆಟ್ಟಿಂಗ್ 2) ಕಟ್ಟಿಂಗ್ 3) ಕಾಸ್ಟ್ಯೂಮ್ ಡಿಸೈನ್ 4) ಹೇರ್ ಕಟ್ಟಿಂಗ್ ಡಿಸೈನ್

**48. "ಒಬ್ಬ ವ್ಯಕ್ತಿ ತನ್ನ ಬದುಕಿನ ಬಗ್ಗೆ ತಾನೇ ಬರೆದುಕೊಳ್ಳುವಕ್ಕೆ" –ಏನೇಂದು ಕರೆಯುತ್ತೇವೆ?**

2) ಜೀವನಚರಿತ್ರೆ 2) ಆತ್ಮಚರಿತ್ರೆ 3) ಪ್ರವಾಸಕತೆ 4) ಯಾವುದೂ ಅಲ್ಲ

**49. ಮೊಟ್ಟಮೊದಲ ಬಾರಿಗೆ 'ಆಟೋ – ಬಯಾಗ್ರಫಿ' ಪದವನ್ನು ಬಳಸಿದವರಾರು –**

1) ರಾಬರ್ಟ್ ಕಾಲ್ಡ್‌ವೆಲ್ 2) ರಾಬರ್ಟ್ ಜೋನ್ಸ್

3) ರಾಬರ್ಟ್ ಸೌತ್ 4) ರಾಬರ್ಟ್ ಜೆನ್ನಿ

**50. "ಆತ್ಮಕಥೆಗಳು ಮಾಹಿತಿಯ ದೃಷ್ಟಿಯಿಂದ ಬರೆದವರ ವೈಯಕ್ತಿಕ ಚರಿತ್ರೆಗಳು" – ಈ ವ್ಯಾಖ್ಯಾನ ಯಾರದು?.**

1) ಸಬೀಹಾ ಭೂಮಿಗೌಡ 2) ಓ.ಎಲ್. ನಾಗಭೂಷಣಸ್ವಾಮಿ

3) ಡಿ.ವಿ.ಜಿ 4) ಬಿ.ಎಂ.ಪುಟ್ಟಯ್ಯ

**51. ವಚನಗಳ ಯಾವ ಬಗೆಯ ಅಭಿವ್ಯಕ್ತಿಯು ಆತ್ಮಕತೆಗಳ ಶೈಲಿಯಲ್ಲಿವೆ?**

1) ಸ್ವರವಚನಗಳು 2) ಬೆಡಗಿನ ವಚನಗಳು 3) ಕಾಲಜ್ಞಾನ ವಚನಗಳು 4) ಆತ್ಮನಿವೇದನೆ

**52. ತುರ್ತುಪರಿಸ್ಥಿತಿಯ ದಿನಗಳನ್ನು ದಾಖಲಿಸಿರುವ ಆತ್ಮಕತೆ ಯಾವುದು?**

1) ಚಂಪಾ – 26ದಿನ 25 ರಾತ್ರಿ 2) ಗಾಂಧಿ – ನನ್ನ ಸತ್ಯಾನ್ವೇಷಣೆ

3) ಬೆಸಗರಹ್ಳಿ ರಾಮಣ್ಣ – ನಾನು ಗಾಂಧಿ 4) ತ.ರಾ.ಸು –ಕತ್ತಲ ರಾತ್ರಿ

**53. ಆತ್ಮಕತೆಗಳ ಬಗೆಗೆ ಯಾವ ಹೇಳಿಕೆ ಸರಿಹೊಂದುವುದಿಲ್ಲ.**

1) ತನ್ನದೇಕತೆಯ ನಿರೂಪಣೆಯಾಗಿರುತ್ತದೆ

2) ವೈಯಕ್ತಿಕತೆಯನ್ನು ಮೀರಿ ಸಾಮಾಜಿಕತೆಯ ಸ್ಪರ್ಶ ಇರುತ್ತದೆ

3) ಸಾಂಸ್ಕೃತಿಕ ಅನನ್ಯತೆ ಇರುತ್ತದೆ

4) ಪರಸ್ಪರರನ್ನು ದ್ವೇಶಿಸುತ್ತದೆ

**54. 'ಕಲೆಯೇ ಕಾಯಕ' ಈ ಆತ್ಮಕತೆಯನ್ನು ಬರೆದಿರುವ ಕಲಾವಿದ ಯಾರು?**

1) ಮು. ಕೃಷ್ಣರಾಯರು 2) ಏಣಗಿ ಬಾಳಪ್ಪ

3) ಗುಬ್ಬಿ ವೀರಣ್ಣ 4) ವರದಾಚಾರ್ಯ

**55. ಮಹಿಳಾ ಆತ್ಮಕತೆಗಳಿಗೆ ಮೂಲ ಪ್ರೇರಣೆ**

1) ಬಸವಣ್ಣನ ವಚನಗಳು 2) ಅಲ್ಲಮನ ವಚನಗಳು

3) ದಾಸಿಮಯ್ಯನ ವಚನಗಳು 4) ಅಕ್ಕನ ವಚನಗಳು

**56. ದು. ಸರಸ್ವತಿ ಅವರ ಅನುಭವ ಕಥನ ಯಾವುದು**

1) ನಾವು ಹುಡುಗಿಯರೇ ಹೀಗೆ 2) ಈಗೇನ್ ಮಾಡೀರಿ

3) ನಾವಿರುವುದೇ ಹೀಗೆ 4) ನನಗಾಗಿ ನಾನು

**57. ಕನ್ನಡದ ಮೊದಲ ದಲಿತ ಮಹಿಳಾ ಆತ್ಮಕತೆ**

1) ಮಾತಂಗಿ ದೀವಟಿಗೆ 2) ಮಹರ್ ದೀವಟಿಗೆ

3) ಹೊಲೆ – ಮಾದಿಗರ ದೀವಟಿಗೆ 4) ದೀವಟಿಗೆ

**58. ಜೀವನಚರಿತ್ರೆ ಸಂಬಂಧಿಸಿದ ಯಾವ ಹೇಳಿಕೆ ಸರಿ ಹೊಂದುತ್ತದೆ.**

ಎ) ತನ್ನ ಜೀವನಾನುಭವಗಳನ್ನು ಬೇರೊಬ್ಬರು ದಾಖಲಿಸುವುದು.

ಬಿ) ತನ್ನ ಜೀವನಾನುಭವಗಳನ್ನು ತಾನೇ ನಿರೂಪಿಸಿಕೊಳ್ಳುವುದು.

ಸಿ) ಆತ್ಮಕತೆಯಲ್ಲಿ ತನ್ನದೇ ಅಭಿವ್ಯಕ್ತಿ ಮತ್ತು ನಿರೂಪಣೆ ಇರುತ್ತದೆ.

**ಸರಿಯಾದ ಆಯ್ಕೆಗಳು**

1)ಎ ಮಾತ್ರ ಸರಿ 2) ಎ ಸರಿ ಆದರೆ ಬ, ಸಿ, ಡಿ ತಪ್ಪು

3)ಎ ಮತ್ತು ಡಿ ಮಾತ್ರ ಸರಿ 4) ಎಲ್ಲವೂ ಸರಿ

**59. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.**

1) ಕುದಿ ಎಸರು 2) ಹೇಸರಗತ್ತೆ 3) ನಾನಾಮುಖಗಳು 4) ಆ ಮುಖ ಈ ಮುಖ

**60. 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು'ಇದರ ಕರ್ತೃ–**

1) ಕೆ. ಷರೀಫಾ 2) ಸಾರಾ ಅಬೂಬಕರ್ 3) ಭಾನುಮುಷ್ತಾಕ್ 4) ಮಮ್ತಾಜ್ ಬೇಗಂ

*****